ಸಿದ್ಧಿಸಿದೆ. ಇಂತಹ ವಾಕ್ಯಗಳು ಪುಸ್ತಕದ ಪ್ರತಿಪುಟದಲ್ಲೂ ಕಂಗೊಳಿಸುತ್ತ, ಇಡೀ ಪುಸ್ತಕ ತನ್ಮಯತೆಯಿಂದ ಓದಿಸಿಕೊಂಡು ಹೋಗುತ್ತದೆ. ಕಡೆಯಲ್ಲಿ ಸ್ವಾಮೀಜಿಯವರ ವಿಶೇಷ ಕೊಡುಗೆಯನ್ನು ನೆನಪಿಸಿಕೊಳ್ಳಲು ಸುಲಭವಾದ ಐದು ಅಂಶಗಳನ್ನು ಪೂಜ್ಯ ಲೇಖಕರು ಮುಂದಿಡುತ್ತಾರೆ. ಹೀಗೆ ಆಧುನಿಕ ವೈಜ್ಞಾನಿಕ ಜಗತ್ತನ್ನು ಬೆರಗುಗೊಳಿಸಿದ, ಹಾಗೆಯೇ ಎಚ್ಚರಿಸಿದ ಮಹಾಚೇತನವಾದ ಸ್ವಾಮಿ ವಿವೇಕಾನಂದರ ಬದುಕು ಮತ್ತು ಸಂದೇಶಗಳ ಯಾವ ಮಹತ್ವದ ಅಂಶವನ್ನೂ ಬಿಡದೆ ಎಲ್ಲ ಮಹತ್ವದ ಅಂಶಗಳನ್ನೂ ಈ ಕಿರುಪುಸ್ತಕದಲ್ಲಿ ಪೂಜ್ಯ ಸ್ವಾಮಿ ಹರ್ಷಾನಂದಜಿ ಅವರು ಸಂಕ್ಷಿಪ್ತವಾಗಿ ಬಿಂಬಿಸಿದ್ದಾರೆ.

ಇದೇ ರೀತಿಯ ಅಗಾಧ ಸಾಮರ್ಥ್ಯವನ್ನು ಅವರ ಇನ್ನೊಂದು ಕಿರುಪುಸ್ತಕವಾದ **ಮನುಕುಲಕ್ಕೆ ಸ್ವಾಮಿ ವಿವೇಕಾನಂದರ ಸಂದೇಶ**ದಲ್ಲೂ ಕಾಣುತ್ತೇವೆ. ಈ ಎರಡನೆ ಪುಸ್ತಕ ಮೊದಲ ಕೃತಿಗೆ ತತ್ಸಮವಾದ ಶ್ರೇಷ್ಠಗುಣದ ಪೂರಕಕೃತಿಯಾಗಿದೆ. ಆಧುನಿಕ ವೈಜ್ಞಾನಿಕ ಜಗತ್ತು ಒಪ್ಪುವಂತಹ, ಇಡೀ ವಿಶ್ವಕ್ಕೆ ಅನ್ವಯವಾಗುವ ಸಂದೇಶಗಳನ್ನು ಮನುಕುಲದ ಒಳಿತಿಗೆ, ಪ್ರಗತಿಗೆ ಸ್ವಾಮಿ ವಿವೇಕಾನಂದರು ಕೊಟ್ಟಿರುವುದನ್ನು ಈ ಪುಸ್ತಕ ನಮಗೆಲ್ಲರಿಗೂ ಮನವರಿಕೆ ಮಾಡಿಕೊಡುತ್ತದೆ. ಆಧುನಿಕ ಮಾನವನ ಎಲ್ಲ ಸಮಸ್ಯೆಗಳಿಗೂ ಸ್ವಾಮೀಜಿಯವರ ಸಂದೇಶಗಳಲ್ಲಿ ಪರಿಹಾರವಿರುವುದನ್ನು ಪೂಜ್ಯ ಲೇಖಕರು ಸೂಚಿಸಿದ್ದಾರೆ.

ಧರ್ಮದ ಅನುಷ್ಠಾನವೇ ಆಧ್ಯಾತ್ಮಿಕತೆ; ಧರ್ಮವೆಂದರೆ ಪ್ರತಿಯೊಬ್ಬ ಮಾನವನಲ್ಲೂ ಸುಪ್ತವಾಗಿರುವ ದೈವತ್ವದ ಪ್ರಕಟನೆ; ಭಕ್ತಿ–ಶರಣಾಗತಿ, ಕಾರ್ಯಶ್ರದ್ಧೆ, ತ್ಯಾಗ, ಶಿವಭಾವದಲ್ಲಿ ಜೀವಸೇವೆ – ಇವೇ ಸಾಧನೆಯ ನಾಲ್ಕು ರಾಜಮಾರ್ಗಗಳು. ವಿವೇಕವೊಂದೇ ಎಲ್ಲ ಸಮಸ್ಯೆಗಳಿಗೂ ಸರ್ವೌಷಧಿ. ಆದ್ದರಿಂದ ಸ್ವಾಮಿ ವಿವೇಕಾನಂದರು ಶಿಕ್ಷಣಕ್ಕೆ ಒತ್ತು ಕೊಡುತ್ತಾರೆ; ನೂತನ ಶಿಕ್ಷಣ ಹೇಗಿರಬೇಕೆಂಬುದನ್ನು ವಿಶದೀಕರಿಸುತ್ತಾರೆ. ಆರೋಗ್ಯಯುಕ್ತ ಸಶಕ್ತ ಕಾಯ, ವಿವೇಕಯುತ ಬುದ್ಧಿಶಕ್ತಿ, ಸುಸಂಸ್ಕೃತ ಮನಸ್ಸು, ನೊಂದವರ ಬಗ್ಗೆ ಪ್ರೀತಿ ಮತ್ತು ಅನುಕಂಪ ತುಂಬಿದ ಹೃದಯ, ವಿಶ್ವವಿಶಾಲವಾದ ಪ್ರೀತಿ ಹಾಗೂ ಆತ್ಮೀಯತೆ – ಇವು ವ್ಯಕ್ತಿತ್ವದ ಪಂಚಮುಖಗಳು. ಇವುಗಳೆಲ್ಲವನ್ನೂ ಪೂರ್ಣ ವಿಕಾಸಗೊಳಿಸುವುದೇ ನಿಜವಾದ ಶಿಕ್ಷಣ. ಇಂತಹ ಶಿಕ್ಷಣ, ಅರಸಿ ಬರುವವರಿಗೆ ಸಿಕ್ಕುವಂತೆ, ಬರಲಾರದ ಬಡ ರೈತ ಕಾರ್ಮಿಕರಿಗೂ ಅವರಿದ್ದಲ್ಲೇ ಸುಲಭವಾಗಿ ದೊರೆಯುವಂತಾಗಬೇಕು. ಡಾಂಭಿಕ ಪೂಜೆ, ಧಾರ್ಮಿಕ ಆಚರಣೆ, ಅಂಧಶ್ರದ್ಧೆ, ಬರಡು ಸಂಪ್ರದಾಯ, ಮಡಿ ಮೈಲಿಗೆ, ಅಸ್ಪೃಶ್ಯತೆ, ಮೂಢನಂಬಿಕೆ – ಇತ್ಯಾದಿ ಮಾನಸಿಕ ರೋಗಗಳಲ್ಲಿ ಮುಳುಗಿದುದೇ ಭಾರತದ ಇಂದಿನ ದುಃಸ್ಥಿತಿಗೆ, ಅಧೋಗತಿಗೆ ಕಾರಣ. ನಿಜವಾದ ಮಾನವಧರ್ಮದ ಬೆಳಕಿನಲ್ಲಿ ಭಾರತದ ನವನಿರ್ಮಾಣ ಮಾಡಲು ಎಲ್ಲರೂ, ವಿಶೇಷವಾಗಿ ಯುವಜನರು, ಕಟಿಬದ್ಧರಾಗಿ ಕಾರ್ಯೋನ್ಮುಖರಾಗಬೇಕು; ಭಾರತದ ಪುನರ್ನಿರ್ಮಾಣವಾಗಬೇಕಾದುದು ಮನುಕುಲದ ಕಲ್ಯಾಣಕ್ಕೆ ಉದ್ಧಾರಕ್ಕೆ ಅವಶ್ಯಕ – ಹೀಗೆ ಸಾರುತ್ತ ಯುವಜನರಲ್ಲಿ ಸ್ವಾಮಿ ವಿವೇಕಾನಂದರು ಕರ್ತವ್ಯದ ಕಹಳೆಯನ್ನು ಮೊಳಗಿಸಿದರು. ಭಗವಂತನಲ್ಲಿ ಅಚಲವಾದ ಭಕ್ತಿ ಶ್ರದ್ಧೆಯಿದ್ದು ನಮ್ಮೊಳಗೆ ಧೈರ್ಯ, ನಿರ್ಭಯತೆ, ಆತ್ಮವಿಶ್ವಾಸಗಳನ್ನು ಮೈಗೂಡಿಸಿಕೊಂಡು, ಬಡವರ, ದೀನ ದುರ್ಬಲರ ಸೇವೆ ಮಾಡುವ ವ್ರತವನ್ನು ನಾವು ಕೈಗೊಳ್ಳಬೇಕು. ಸರ್ವಸಮಾನತಾಭಾವ, ಸಾಮಾಜಿಕ ಕಳಕಳಿ, ತ್ಯಾಗ ಮತ್ತು ನಿಸ್ವಾರ್ಥ ಸೇವೆಗಳನ್ನು ಎತ್ತಿ ಹಿಡಿಯುವ ಸ್ವಾಮಿ ವಿವೇಕಾನಂದರ ದಿವ್ಯ ಸಂದೇಶವನ್ನು ಸ್ವತಃ ಪಾಲಿಸುವುದಲ್ಲದೆ, ಎಲ್ಲೆಡೆ ಪ್ರಸಾರ ಕೂಡ ಮಾಡಬೇಕು.

ಇಂತಹ ಚಿಂತನೆಗಳನ್ನೊಳಗೊಂಡ ಈ ಎರಡು ಕಿರು ಪುಸ್ತಕಗಳು ಸ್ಫೂರ್ತಿದಾಯಕವಾಗಿವೆ. ಈ ಪುಸ್ತಕಗಳ ಲೇಖಕರಾದ ಪೂಜ್ಯ ಸ್ವಾಮಿ ಹರ್ಷಾನಂದಜಿ ಮಹತ್ತಾದ, ಗಹನವಾದ ವಿಚಾರಗಳನ್ನು ಬಹುಸರಳವಾಗಿ ಸಂಕ್ಷಿಪ್ತವಾಗಿ ನಿರೂಪಿಸುವ ಕಲೆಯಲ್ಲಿ ಪರಿಣತರು, ಸಿದ್ಧಹಸ್ತರು. ಅವರ ಭಾಷೆ – ಇಂಗ್ಲಿಷ್ ಆಗಲಿ, ಕನ್ನಡವಾಗಲಿ – ನಿರ್ದುಷ್ಟವಾದುದು, ಶೈಲಿ ಸೊಗಸಾದುದು, ರಚನೆ ಅಚ್ಚುಕಟ್ಟಾದುದು. ಅವರ ಬರವಣಿಗೆ ಒಂದು ಸುಂದರ ಶಿಲ್ಪದಂತೆ ಇರುವುದನ್ನು ಕಾಣುತ್ತೇವೆ. ಇಂತಹ ಮನಸೆಳೆಯುವ ಪುಸ್ತಕಗಳನ್ನು ಎನ್. ಪ್ರಭಾಕರ ಅವರು ಕನ್ನಡಕ್ಕೆ ಸೊಗಸಾಗಿ ಅನುವಾದಿಸಿದ್ದಾರೆ. ಕನ್ನಡ ಭಾಷೆಯ ಜಾಯಮಾನ ಮತ್ತು ನುಡಿಗಟ್ಟುಗಳು ಅನುವಾದವನ್ನು ಹೃದ್ಯವಾಗಿಸಿವೆ. ಈ ಇಬ್ಬರಿಗೂ ಕನ್ನಡ ಓದುಗರು ಉಪಕೃತರಾಗಿದ್ದಾರೆ. ಸ್ವಾಮಿ ವಿವೇಕಾನಂದರನ್ನು ಕುರಿತ ಸಾಹಿತ್ಯಭಂಡಾರಕ್ಕೆ ಈ ಎರಡೂ ಕಿರುಹೊತ್ತಗೆಗಳು ಅಮೂಲ್ಯವಾದ ಕಾಣಿಕೆಗಳಾಗಿವೆ.

**– ಪ್ರೊ. ಪ್ರಭುಪ್ರಸಾದ್, ಮೈಸೂರು**

**ನನ್ನ ಹುಡುಗನೇ, ಮೃತ್ಯು ಅನಿವಾರ್ಯವಾದಾಗ, ಕಲ್ಲುಮಣ್ಣುಗಳ ಹಾಗೆ ನಾಶವಾಗುವುದಕ್ಕಿಂತಲೂ, ಧೀರರಂತೆ ಸಾಯುವುದೇ ಮೇಲಲ್ಲವೇ? ಕ್ಷಣಿಕವಾದ ಈ ಜಗತ್ತಿನಲ್ಲಿ ಒಂದೆರಡು ದಿನಗಳ ಕಾಲ ಹೆಚ್ಚಿಗೆ ಬಾಳುವುದರಿಂದ ಏನು ತಾನೇ ಪ್ರಯೋಜನ? ತುಕ್ಕು ಹಿಡಿಯುವುದಕ್ಕಿಂತಲೂ, ಸವೆದುಹೋಗುವುದು – ಅದರಲ್ಲೂ ಇತರರಿಗಾಗಿ ಸ್ವಲ್ಪವಾದರೂ ಒಳ್ಳೆಯದನ್ನು ಮಾಡುವ ಸಲುವಾಗಿ – ಎಷ್ಟೋ ಒಳ್ಳೆಯದಲ್ಲವೇ?... ಯಾವಾಗ ಉದಾರಹೃದಯಿಗಳಾದ ನೂರಾರು ಪುರುಷರು ಮತ್ತು ಸ್ತ್ರೀಯರು, ಜೀವನದ ವೈಭೋಗಗಳನ್ನು ಅನುಭವಿಸುವ ತಮ್ಮ ಆಸೆಯನ್ನು ತ್ಯಾಗ ಮಾಡುತ್ತಾರೋ, ದಾರಿದ್ರ್ಯ ಮತ್ತು ಅಜ್ಞಾನಗಳ ಸುಳಿಯಲ್ಲಿ ಸಿಲುಕಿ, ನಿಧಾನವಾಗಿ ಕೆಳಕ್ಕೆ ಮುಳುಗಿಹೋಗುತ್ತಿರುವ ತಮ್ಮ ಲಕ್ಷಾಂತರ ದೇಶಬಾಂಧವರ ಬಗ್ಗೆ ವ್ಯಾಕುಲಚಿತ್ತರಾಗಿ, ಅವರಿಗಾಗಿ ತಮ್ಮ ಕೈಲಾದಷ್ಟು ದುಡಿಯುತ್ತಾರೆಯೋ – ಆಗ ಮಾತ್ರವೇ ಭಾರತವು ಮೇಲೇಳುವುದು.**

– ಸ್ವಾಮಿ ವಿವೇಕಾನಂದ



# ನಿಜಗುಣರ ಕೈವಲ್ಯಪದ್ಧತಿ - ಒಂದು ಸ್ಥೂಲ ಪರಿಚಯ

**ಪಾರ್ವತಮ್ಮ ಚಂದ್ರಣ್ಣ**

**(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)**

'ಯೋಗ ಪ್ರತಿಪಾದನಾ ಸ್ಥಲ'ದಲ್ಲಿ ಮಂತ್ರ, ಲಯ, ಹಠ, ರಾಜ ಮತ್ತು ಶಿವಯೋಗಗಳ ಕುರಿತು ಮೆಟ್ಟಿಲೋಪಾದಿಯಲ್ಲಿ ಹಂತ ಹಂತವಾಗಿ ಅನುಭವಪೂರ್ಣವಾದ ವಿವೇಚನೆ ಇದೆ. ಅಂತರ್ಮುಖಿಯಾದ ಯೋಗಸಾಧನೆ ವಿಕಾಸವಾಗುತ್ತಾ ಹೋದಂತೆ, ಪರಮಾತ್ಮನ ಪ್ರತ್ಯಕ್ಷ ಅನುಭವ, ಶಿವನೊಡನೆ ಸಮರಸದ ಆನಂದವನ್ನು ಸಾಧಕ ಅನುಭವಿಸುತ್ತಾನೆ. ನಿಜಗುಣರು ತಮ್ಮ ಪ್ರಾಮಾಣಿಕವಾದ ಬೇಡಿಕೆಯನ್ನು ಈ ಕೆಳಗಿನ ಮಾತುಗಳಲ್ಲಿ ವ್ಯಕ್ತಗೊಳಿಸಿದ್ದಾರೆ:

**ಯೋಗಿಯೆಂದೆನಿಸೆನ್ನನು ವಿಷಯ ಸುಖ**
**ಭೋಗಿಯೆನಿಸದೆ ಜಗದೊಳು ಶಿವನೆ**

ಎಂಬ ಮಾತಿನಲ್ಲಿ ಪ್ರಾಪಂಚಿಕ ವಿಷಯಸುಖದಿಂದ ವಿಮುಖಗೊಳಿಸಿ ಯೋಗಸಾಧನೆಯಲ್ಲಿ ತನ್ನನ್ನು ತೊಡಗಿಸುವಂತೆ ಬೇಡಿಕೊಳ್ಳುತ್ತಾರೆ. ಯೋಗಸಾಧನೆಯಲ್ಲಿ ತೊಡಗಿದ ಮನಸ್ಸು ದೃಢವಾಗಿ ನಿಲ್ಲಬೇಕು. ಚಂಚಲವಾಗಿ ಅತ್ತಿತ್ತ ಹರಿದಾಡದಂತೆ ಪರಮಮಂತ್ರವೆನಿಸಿದ ಶಿವನಾಮವನ್ನು ಜಪಿಸಲು ಅದಕ್ಕೆ ಹಚ್ಚಬೇಕು. ಆದರೆ ಮನಸ್ಸು ಬಹಳ ವಿಚಿತ್ರವಾದುದು ಮತ್ತು ಚಂಚಲವಾದುದು. ನೆನೆಯಲೇಬೇಕಾದುದೊಂದನ್ನು ಬಿಟ್ಟು ಉಳಿದೆಲ್ಲ ಕಡೆ ಹರಿದಾಡುತ್ತದೆ. ಮನಸ್ಸಿನಿಂದ ನಾವು ಯಾವುದನ್ನು ದೂರ ತಳ್ಳಲು ಉದ್ದೇಶಿಸುತ್ತೇವೆಯೋ, ಅದೇ ಹೆಚ್ಚು ಭದ್ರವಾಗಿ ನೆಲೆಯೂರುವುದಕ್ಕೆ ಪ್ರಯತ್ನಿಸುತ್ತದೆ. ಹೊರಹಾಕಲು ಬಲವಂತಪಡಿಸಿದಷ್ಟೂ ಆ ವಿಚಾರ ಹೆಚ್ಚು ಗಟ್ಟಿಯಾಗಿ ತಳವೂರುತ್ತದೆ. ಅದಕ್ಕೆ ನಿಜಗುಣರು ತಕ್ಕ ಉಪಾಯವನ್ನು ಸೂಚಿಸಿದ್ದಾರೆ.

**ಮನವೆಂಬ ಗಿಳಿಯನೊಯ್ಯಾರದೊಳೋವಿ**
**ಮೆಲ್ಲನೆ ಮುದ್ದುನುಡಿಗಳಿಸಲೆ ಮಾನಿನಿ ॥ಪ॥**

ಎನ್ನುವ ಹಾಡಿನಲ್ಲಿ ಮನಸ್ಸನ್ನು ಹದಗೊಳಿಸುವ ರೀತಿಯನ್ನು ಬಣ್ಣಿಸುತ್ತಾರೆ. ಒತ್ತಾಯದ ಬಲಾತ್ಕಾರ ಹೇರದಂತೆ ಮೆಲ್ಲನೆ ಮುದ್ದು ಮಾಡಿ ಪ್ರೀತಿಯಿಂದ ಮನಸ್ಸೆಂಬ ಗಿಳಿಗೆ ಶಿವನಾಮವನ್ನು ಕಲಿಸಿದಾಗ ಮಾತ್ರ ಅದು ಕಲಿಯುತ್ತದೆ. ಹೀಗೆ ಮನಸ್ಸನ್ನು ಶಿವಮಾರ್ಗಕ್ಕೆ ತಂದುಕೊಂಡು ಅನ್ಯ ವಿಷಯಗಳಿಗೆಳಸದಂತೆ ಮಾಡಿದಾಗ, ಶಿವನ ನಾಮವು ಮನದಲ್ಲಿ ಬೇರೂರಿ ನಿಲ್ಲುತ್ತದೆ. ಆಗ ಸಂಕಲ್ಪ ವಿಕಲ್ಪಗಳು ದೂರಾಗಿ ಮನಸ್ಸಿನ ದೃಢತೆ ಸಿದ್ಧಿಸುವುದು. ಅಂತಹ ದೃಢವಾದ ಮನಸ್ಸಿನಲ್ಲಿ, **'ನಿಮಿಷವಾಗಲಿ ನಿಮ್ಮ ನೆನಹು ನಿಂದೊಡೆ ಮುಕ್ತಿ'** ಎಂಬ ಮಾತು ಸ್ವಯಂವೇದ್ಯವಾಗುವುದು.

ಯೋಗಸಾಧನೆಯ ವಿವಿಧ ಹಂತಗಳನ್ನು ದಾಟಿ ಮುಂದುವರಿದ ಯೋಗಿ ಐದನೆಯದಾದ ಶಿವಯೋಗದ ಸಾಧನೆಯಲ್ಲಿ ಇಷ್ಟಲಿಂಗದ ಪೂಜೆಯ ಮಹತ್ವವನ್ನು ಮನಗಾಣುತ್ತಾನೆ.

**ಪರತರ ಶಿವಲಿಂಗವೆಳಸಿ ನಿನಗಾಗಿ ।**
**ಕರಕಂಜದೊಳು ಕಾಣಿಸಿತು ಯೋಗಿ ಯಜಿಸು ॥ಪ॥**

ಎಂಬ ಹಾಡಿನಲ್ಲಿ ಇಡೀ ವಿಶ್ವದ ಚೇತನವೇ ಚುಳುಕಾಗಿ ಕರಸ್ಥಲಕ್ಕೆ ಇಷ್ಟಲಿಂಗದ ರೂಪಾಗಿ ಬಂದು ಪೂಜೆಗೊಳ್ಳುವ ವಿಚಾರವನ್ನು ತಿಳಿಯಬಹುದು. ಪೂಜಾನಿಷ್ಠೆ ಬಲಗೊಳ್ಳುತ್ತಾ ಹೋದಂತೆ ಆ ಪರವಸ್ತುವಿನ ರೂಪವು ಕಣ್ಣಮುಂದೆ ಅವಿಚಲಿತವಾಗಿ ನಿಂತಂತಾಗುತ್ತದೆ. ಅಂತಹ ಅನುಭವವೇದ್ಯವಾದ ಪರವಸ್ತುವಿನ ಪರಮಸುಖವನ್ನು ಸ್ವಯಂ ಅನುಭವಿಸಿದ ನಿಜಗುಣರು,

**ಕಣ್ಣ ಮುಂದೆ ಕಾಣಿಸುತಿದೆ ಪರವಸ್ತುವಿದ**
**ನಣ್ಣಗಳರಸಿ ಬೇರೆ ಬಳಲುವರದೇಕೆ ॥ಪ॥**

ಎಂಬ ಮಾತಿನಲ್ಲಿ ಯೋಗಸಾಧನೆಯ ಉನ್ನತ ಹಂತದಲ್ಲಿ ಪರಮಾತ್ಮನನ್ನು ಸಾಕ್ಷಾತ್ತಾಗಿ ಕಂಡು ಅನುಭವಿಸಿ ಆನಂದ ಪಡುವ ಸಾಧ್ಯತೆಯನ್ನು ತಿಳಿಸಿದ್ದಾರೆ. ಅಂತಹ ಸಾಧನೆಗೈಯುವ ಶಕ್ತಿ ಇಲ್ಲದವರು ದೇವರಿಗಾಗಿ ಎಲ್ಲೆಲ್ಲಿಯೋ ಅರಸಿ ಬಳಲುವುದೇಕೆ? ಏಕೋಭಾವದಿಂದ ದೃಢಮನಸ್ಕರಾಗಿ ಸಾಧಿಸಿದರೆ ಇದ್ದಲ್ಲಿಯೇ ಕಣ್ಣೆದುರು ಆ ಪರವಸ್ತುವನ್ನು ಕಾಣಬಹುದು ಎಂಬ ಅಂಶ ಇಲ್ಲಿ ಸ್ಪಷ್ಟವಾಗಿದೆ.

ಯೋಗಿಯ ಸಾಧನೆ ಮತ್ತಷ್ಟು ಮುಂದುವರಿದು ಶಿವಯೋಗದ ತುತ್ತತುದಿಯನ್ನೇರಿದಾಗ ಲಿಂಗಾಂಗಸಾಮರಸ್ಯದ ಎಣೆಯಿಲ್ಲದ ಆನಂದ ದೊರಕುತ್ತದೆ! ಅಂಗವೆಂಬ ಶರಣಸತಿ ಲಿಂಗಪತಿಯೊಡನೆ ಬೆರೆತು ಬೇರಾಗದಂತೆ ಇರುವ ಪರಿ ಅನುಭವವೇದ್ಯವಾದದ್ದು. ಅದನ್ನು ಪ್ರತ್ಯಕ್ಷವಾಗಿ ಅನುಭವಿಸಿದ ನಿಜಗುಣರು,

**ಸತಿಪತಿಗಳಿವರ ಸಮರತಿಸುಖದ ಬಾಳುವೆಗೆ ।**
**ಪ್ರತಿಯುಂಟೆ ಲೋಕದೊಳು ನೋಡೆ ಲಲಿತಾಂಗಿ ॥**

ಎಂಬ ಹಾಡಿನಲ್ಲಿ ಮುಂದುವರಿದು ಶರಣಸತಿ ಲಿಂಗಪತಿಯರ ಸಮರತಿಯ ಸುಖದ ಆನಂದವನ್ನು ಮನಮುಟ್ಟುವಂತೆ ವರ್ಣಿಸಿದ್ದಾರೆ.

**ಬೆರೆಸಿ ಬೇರೆನಿಸದೆರಡಾಲಿಕಲ್ಲುಗಳೇಕ**
**ಸುರಸವಾದಂತೆ ಪತಿ ಶಂಭುಲಿಂಗ**
**ಶರಣಸತಿಯಳ ಕೂಡಿ ಪರತರಾನಂದದೊಳು**
**ಪರವಶವನೈದಿಹುದನುಪಮಿಸಲು ಬಹುದೆ**

ಎರಡು ಆಲಿಕಲ್ಲುಗಳು ಒಂದರೊಡನೊಂದು ಬೆರೆತಾಗ ದ್ರವ ರೂಪದಲ್ಲಿ ಎರಡೂ ನೀರಾಗಿ ಸಮರಸವಾಗಿಬಿಡುತ್ತವೆ. ಅಲ್ಲಿ ಭಿನ್ನತೆಯ ಭಾವವೇ ಇಲ್ಲ. **'ಒಂದೆಂಬೆನೆ ಎರಡಾಗಿದೆ ಎರಡೆಂಬೆನೆ ಒಂದಾಗಿದೆ'** ಎಂಬಂತೆ ಭಿನ್ನಭಾವವಿಲ್ಲದೆ ಕೂಡಿ ಏಕವಾದಂತೆ ಶರಣಸತಿ, ಪತಿ ಶಂಭುಲಿಂಗನೊಡನೆ ಕೂಡಿ ಒಂದಾಗುವುದು. ಅಲ್ಲಿ ನಾನು ನೀನೆಂಬುಭಯಕ್ಕೆ ಅವಕಾಶವಿಲ್ಲ. ಹಾಗೆಯೇ ಲಿಂಗಪತಿಯನ್ನು ಬೆರೆತ ಶರಣ ಆನಂದ ಪರವಶನಾಗಿದ್ದಾನೆ. ಆ ಅನುಭವವನ್ನು ಉಪಮಿಸಲಾಗದು. ಇನ್ನೊಂದಕ್ಕೆ ಹೋಲಿಸಿ ಅದನ್ನು ಶಬ್ದಗಳಲ್ಲಿಡಬಹುದೆ? ಆ ಪರತರಾನಂದದ ಪರವಶತೆ ಅನುಪಮ, ಅವರ್ಣನೀಯ. ಇದು ನಿಜಗುಣ ಶಿವಯೋಗಿಗಳ ದಿವ್ಯಾನುಭವ.

ಶಿವಕಾರುಣ್ಯ ಸ್ಥಲದಿಂದ ಪ್ರಾರಂಭವಾದ ಸಾಧಕನ ಬೆಳವಣಿಗೆಯು ಕೊನೆಯ ಹಂತವಾದ **ಜ್ಞಾನಪ್ರತಿಪಾದನ ಸ್ಥಲ**ದಲ್ಲಿ ಕೊನೆಗೊಳ್ಳುವುದು.

ನಿಜಗುಣರು ಜ್ಞಾನಕ್ಕೆ ಬಹಳ ಮಹತ್ವ ಕೊಟ್ಟಿದ್ದಾರೆ. ಭಕ್ತಿ, ವೈರಾಗ್ಯ, ಸುಕರ್ಮ, ವೃತ್ತಿ, ಗುರುಭಜನೆ, ಹರನ ಪೂಜೆ, ಧ್ಯಾನ, ಯೋಗ ಎಲ್ಲವೂ ಒಂದೊಂದಾಗಿ ಸೋಪಾನವೇರಿ ಕೊನೆಗೆ ಜ್ಞಾನಮಂದಿರದಲ್ಲಿ ಲೀನವಾಗುತ್ತವೆ. ಅಧ್ಯಾತ್ಮದ ತುತ್ತತುದಿಗೇರಬೇಕೆಂದರೆ ಸಾಧಕನಾದವನು ಸುಜ್ಞಾನಿಯಾಗಲೇಬೇಕು. ಸುಕರ್ಮಾದಿಗಳು ಜ್ಞಾನವನ್ನು ಪಡೆಯಲು ಮಾರ್ಗ ಮಾತ್ರ. ಸಾಧಕನಿಗೆ, "ನಾನು ಶಿವನ ಸ್ವರೂಪ, ಅಂತೆಯೇ ಜಗತ್ತಿನ ಪ್ರತಿಯೊಂದು ವಸ್ತುವೂ ಶಿವನ ಅಂಶ" ಎಂಬ ಅರಿವು ಸ್ವಾನುಭವಕ್ಕೆ ಬರುವುದು ಜ್ಞಾನ ಪ್ರಾಪ್ತವಾದಾಗಲೇ. ಇಲ್ಲದಿದ್ದರೆ ಅದು ಬರಿಯ ಬುದ್ಧಿಯ ಕಸರತ್ತಾಗುತ್ತದೆ, ಮಾಡುವ ಕರ್ಮಗಳೆಲ್ಲ ಕುರುಡು ಆಚರಣೆಗಳಾಗುತ್ತವೆ.

ವೇದ, ಆಗಮ, ಪುರಾಣಾದಿಗಳಲ್ಲಿ ಹೇಳಿರುವ ಯಾಗಯಜ್ಞ ಜಪತಪಾದಿ ಪೂಜೆಗಳು ಜ್ಞಾನ ಲಭಿಸುವವರೆಗೆ ಅಷ್ಟೆ. ಎಷ್ಟೇ ಕರ್ಮಗಳನ್ನು ಮಾಡಿದರೂ ಸುಜ್ಞಾನದ ಕೋಟಿಯೊಳಗೊಂದು ಭಾಗಕ್ಕೆ ಸಮವಾಗಿರುವುದು ಎಂದು ಹೇಳಿರುವುದು, ಜ್ಞಾನದ ಪರಮ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತದೆ.

**ತನುವ ದಂಡಿಸಬೇಡ ಮನವ ನಿಲ್ಲಿಸಬೇಡ ।**
**ಧನವ ನೀಗಿರಬೇಡ ಮನೆಮಾರು ತೊರೆದು ॥**
**ವನವಾಸ ಬೇಡ ನಿನಗಿನಿತು ತತ್ವಜ್ಞಾನ ಸಂ**
**ಜನಿಸಲದಘವೆಲ್ಲವನು ಕೆಡಿಪುದದರಿಂದ ॥**

ಎಂಬ ಮಾತುಗಳಲ್ಲಿ ಕೇವಲ ದೇಹದಂಡನೆ ವ್ಯರ್ಥ ಎಂಬ ಅರ್ಥ ಹೊರಹೊಮ್ಮಿದೆ. ಅರಿವಿಲ್ಲದೆ ಕೇವಲ ಕ್ರಿಯೆಗೆ ಬೆಲೆಯಿಲ್ಲ. ಅರಿವು, ಕ್ರಿಯೆ ಒಂದಕ್ಕೊಂದು ಸಮನ್ವಯವಾಗಿದ್ದರೆ ಮಾತ್ರ ಪರಮಾತ್ಮನು ದೊರೆಯುವನು ಎಂಬ ಮಾತನ್ನು ಶರಣರ ವಚನಗಳಲ್ಲೂ ಕಾಣುತ್ತೇವೆ. ಅದನ್ನೇ ನಿಜಗುಣರು ಇಲ್ಲಿ ನಿರೂಪಿಸಿದ್ದಾರೆ. ಕಠಿಣವಾದ ದೇಹದಂಡನೆಗಳಿಂದಲೇ ಏನನ್ನೂ ಸಾಧಿಸಲಾಗದು. ದೈಹಿಕ ಪರಿಶ್ರಮ ಕೇವಲ ಸಾಧನೆಯ ಮಾರ್ಗ ಮಾತ್ರವಾಗಬಲ್ಲದು. ಸಾಧಕನ ಪರಮಗಂತವ್ಯ ಪರಮಾತ್ಮನ ಅರಿವು, ಜ್ಞಾನ. ಇಂತಹ ಅರಿವನ್ನು ಪಡೆದ ಜ್ಞಾನಿಗೆ, 'ಜನನಾದಿ ವಿಕೃತಿ ಜೀವರಿಗೆ ತೋರಿದೊಡೆ ಅದನು ತನಗೆ ನಿಜವಲ್ಲವೆಂದರಿದ ಪರಿಣಾಮ' ಉಂಟಾಗುತ್ತದೆ.

**"ತೋರದಯ್ಯಾ ಸುಖ ತೋರದಯ್ಯಾ, ಬೇರೆ ಬೇರೆ ಭಾವಿಸಿ ಬ್ರಹ್ಮಜ್ಞಾನವೊಂದಿಲ್ಲದವಗೆ"** – ಬ್ರಹ್ಮಜ್ಞಾನವನ್ನು ಗಳಿಸದಿದ್ದರೆ ಜಗತ್ತಿನ ಬೇರೆ ಯಾವ ವಿದ್ಯೆಯನ್ನು ಗಳಿಸಿದರೂ ಸುಖ ಸಿಗದು ಎಂಬ ಪದ್ಯದಲ್ಲಿ ನಿಜಗುಣರು, "ಶಂಭುಲಿಂಗದನುವನರಿಯದೆ" ಕೋಟಿ ಜಪಗಳನ್ನೆಸಗಿದರೂ ವ್ಯರ್ಥ" ಎಂದಿದ್ದಾರೆ.